ಹಾಕಿಕೊಂಡು ಹಸ್ತಸಾಮುದ್ರಿಕ ನೋಡಲು ದಿನವೆಲ್ಲಾ ಜನರಿಗಾಗಿ ಕಾಯ್ದು ಕೂಡುತ್ತಿದ್ದ ಬಾಬಾ.

ಒಂದು ದಿನ ಬಾಬಾನ ಆಶ್ಚರ್ಯದಿಂದ ಕೇಳಿದ್ದ ರಾಮು, 'ಬಾಬಾ, ನೀನು ಹೇಳೋ ಭವಿಷ್ಯ ಎಲ್ಲಾ ನಿಜ ಆಗುತ್ತಾ?'

'ಮತ್ತೆ! ಇಲ್ಲದಿದ್ದರೆ ಜನ ನನ್ನ ಮುಂದೆ ಹೀಗೆ ಸಾಲುಗಟ್ಟುತ್ತಿದ್ದರಾ?' ರಾಮು ಸುಮ್ಮನಾಗಿದ್ದ.

ಬಾಬಾನ ಹತ್ತಿರ ಬರುತ್ತಿದ್ದವರು ದಿನಕ್ಕೆ ಒಂದೋ ಎರಡೋ ಗಿರಾಕಿಗಳು. ಒಂದು ಸಾರಿ ಬಂದವರು ಮತ್ತೆ ಎರಡನೇ ಸಾರಿ ಬಂದದ್ದು ರಾಮೂಗೆ ಜ್ಞಾಪಕವಿರಲಿಲ್ಲ. ರಾಮು ಆಸೆಯಿಂದ ಕೇಳಿದ 'ಬಾಬಾ, ನನ್ನ ಕೈನೋಡಿ ಹೇಳ್ತೀಯಾ, ನಾನು ದೊಡ್ಡೋನಾದ ಮೇಲೆ ಏನಾಗ್ತೀನೀಂತ?'

'ನಿನ್ನ ಕೈ ನೋಡೋದೇನಿದೆ? ಮುಖ ನೋಡಿಯೇ ಹೇಳ್ತೀನಿ. ಇನ್ನೇನಾಗ್ತೀ. ದೊಡ್ಡೋನಾದ ಮೇಲೆ ದೊಡ್ಡ ಶೂ ಪಾಲಿಶ್ ಹುಡುಗ ಆಗ್ತೀ, ಅಷ್ಟ ಹಾ...'

ರಾಮೂಗೆ ಆಶ್ಚರ್ಯವಾಗಿತ್ತು. ಅದ್ಹೇಗೆ ಬಾಬಾಗೆ ತನ್ನ ಮುಖ ನೋಡಿಯೇ ಇದು ಗೊತ್ತಾಯ್ತು?

ರಾಮೂನ ಬಲಗಡೆ ಪಕ್ಕದಲ್ಲಿ ಕೂಡುತ್ತಿದ್ದವನು ಒಬ್ಬ 'ಚನಾವಾಲಾ'. ಅವನಿಗೆ ಬಿಡುವಿಲ್ಲದ ವ್ಯಾಪಾರ, ಹಾಡುತ್ತಾ ಹಾಡುತ್ತಾ ಗಿರಾಕಿಗಳಿಗೆ 'ಚನಾ– ಕುರ್‌ಮುರಾ' ತುಂಬಿಸಿ ಕೊಡುತ್ತಿದ್ದ ಅವನು. ಚನಾವಾಲಾನ ಕೈಯಲ್ಲಿ ಮಾತ್ರ ನಕಲು ಬಂಗಾರದ ಪಟ್ಟಿಯ ಕೈಗಡಿಯಾರ. ಇದರಿಂದ ಅವನ ಅಂತಸ್ತು ಮಿಕ್ಕವರಿಗಿಂತ ಹೆಚ್ಚು. ಆ ಸಾಲಿನವರಿಗೆಲ್ಲಾ ಕೇಳಿದಾಗ ಹೆಮ್ಮೆಯಿಂದ 'ಟೇಮ್' ತಿಳಿಸುತ್ತಿದ್ದ ಅವನು.

ಅವನ ಪಕ್ಕದಲ್ಲಿ ಕಾಲಕ್ಕನುಸಾರವಾಗಿ ಸೇಬೋ, ಕಿತ್ತಲೆ ಹಣ್ಣೋ ರಾಶಿ ಹಾಕಿಕೊಂಡು ಮಾರುವ ಹಣ್ಣಿನವನು. ಸಾಯಂಕಾಲವಾಯಿತೆಂದರೆ, ಗಂಟಲು ಹರಿಯುವ ಹಾಗೆ 'ಬನ್ನಿ... ಬನ್ನಿ... ಕಾಶ್ಮೀರ ಸೇಬು. ಐದರ ಮಾಲು ನಾಲ್ಕಕ್ಕೆ, ಐದರ ಮಾಲು ನಾಲ್ಕಕ್ಕೆ' ಎಂದು ಕೂಗಿ ಕೊಳ್ಳುತ್ತಿದ್ದ ಅವನು. ಪ್ರತಿದಿನ ಸಂಜೆ ಪಟಪಟನೆ ಕಿವಿಯ ಮೇಲೆ ಅಪ್ಪಳಿಸುವ ಈ ಕೂಗು ಕೇಳದಿದ್ದರೆ ರಾಮೂಗೆ ಬಿಕೋ ಎನ್ನಿಸುತ್ತಿತ್ತು.

ಆದಾದ ಮೇಲೆ ಕುಣಿಯುವ ಬೊಂಬೆಗಳನ್ನು ಮಾರುವವ. ಒಂದೇ ಕಣ್ಣು, ಉಬ್ಬುಹಲ್ಲು, ಬೋಳು ತಲೆಯ ಅವನನ್ನು ನೋಡಿದರೆ ರಾಮೂಗೆ ಭಯ. ನೆಲದ ಮೇಲೆ ಗೋಣಿರಟ್ಟೊಂದನ್ನು ಹಾಸಿಕೊಂಡು, ಎಡಬಿಡದೆ ತಮಗೆ ತಾವೇ ಕುಣಿಯುವ ಪುಟ್ಟ ಬಣ್ಣ ಬಣ್ಣದಂಗಿಯ ಪ್ಲಾಸ್ಟಿಕ್ ಗೊಂಬೆಯ ಜೊತೆಗಳನ್ನು ಕುಣಿಸುತ್ತಾ ಕೂಗುತ್ತಾ ಮಾರಾಟ ಮಾಡುತ್ತಿದ್ದ ಅವನು. ಅವು ಹೇಗೆ ಯಾರ ಸಹಾಯವೂ ಇಲ್ಲದೆ ಕುಣಿಯುತ್ತವೆಂಬುದು ರಾಮೂಗೆ ಎಂದೂ ಬಗೆಹರಿಯದ ಆಶ್ಚರ್ಯದ ಸಂಗತಿ. ಅವನಿಗೆ ನೋಡಿದಾಗೆಲ್ಲಾ ಆ ಗೊಂಬೆಗಳನ್ನು ಕೊಳ್ಳಬೇಕೆಂದು ತುಂಬಾ ಆಸೆಯಾಗುತ್ತಿತ್ತು. ಎಲ್ಲರಿಗೂ ಎರಡು ರೂಪಾಯಿಗೆ ಮಾರುತ್ತಿದ್ದ ಆ ಜೊತೆಗಳನ್ನು ರಾಮೂಗಾದರೆ ಒಂದೇ ರೂಪಾಯಿಗೆ ಕೊಡುವುದುದಾಗಿ ಮಾರುವವ ಆಸೆ ತೋರಿಸಿದ್ದ. ಈ ವಿಷಯ ಕಾಕಿಗೆ ಹೇಳಿದಾಗ ಅವಳು ರೇಗಿದ್ದಳು, 'ಸುಮ್ಮನೆ ದುಡ್ಡು ದಂಡ. ನೀನೇನೂ ಎಳೇ ಮಗೂನೇ ಗೊಂಬೆ ಇಟ್ಕೊಂಡು ಆಡೋಕೆ? ಆ ಕಸಕ್ಕೆಲ್ಲಾ ದುಡ್ಡು ಹಾಕೋಕೆ ನಾವೇನೂ ಲಕ್ಷಾಧೀಶ್ವರರಲ್ಲ. ಸದ್ಯ. ಎರಡು ಹೊತ್ತು ಹೊಟ್ಟೆ ತುಂಬಾ